ಪಡೆಯಲು ಕಂದಾಯ ಇಲಾಖೆಯೊಡನೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು.

ವರ್ಷದಲ್ಲಿ ಶಾಲೆಗಳು ನಡೆಯುವ ವಿಚಾರ ಕುರಿತು.

2396(2987)

ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 18 ವರ್ಷ ಮೇಲ್ಪಟ್ಟ ಮತದಾರರ ಯಾದಿ ತಯಾರಿಕೆ ಒಂದು ತಿಂಗಳು, ಡ್ರಾಪ್ ಔಟ್ ಮಕ್ಕಳ ಆಂದೋಲನ ಮೆರವಣಿಗೆ, 18 ವರ್ಷ ಮೇಲ್ಪಟ್ಟ ಮತದಾರರ ಯಾದಿ ಪರಿಷ್ಕರಣೆ, ಚುನಾವಣೆ ಡ್ಯೂಟಿ ಪಲ್ಸ್ ಪೋಲಿಯೋ ಡ್ಯೂಟಿ, ಶಕ್ತಿ ಮಕ್ಕಳ ಗಣತಿ ಡ್ಯೂಟಿ, ಎಸ್.ಎಸ್.ಎಲ್.ಸಿ. ಪರೀಕ್ಷೆ ಮೇಲ್ವಿಚಾರಕರ ಡ್ಯೂಟಿ, ಹೊಂ ಅಸ್ಪಿಂಗ್ ಮತ್ತು ಗಣತಿ ಟ್ರೈನಿಂಗ್, ಮನೆ ಗಣತಿ ಮತ್ತು ಕುಟುಂಬಗಳ ಗಣತಿ ಪ್ರತಿ ತಿಂಗಳು, ಗೋದಿ ವಿತರಣೆ 1 ದಿನ, ಸಿ ಆರ್ ಸಿ ಟ್ರೈನಿಂಗ್ ಒಂದು ದಿವಸ, ಸ್ಕೌಟ್ ಗೈಡ್ ಟ್ರೈನಿಂಗ್ ಒಂದು ದಿವಸ ಡಿ.ಪಿ.ಇ.ಪಿ. ಟ್ರೈನಿಂಗ್ ಒಂದು ದಿವಸ, ಧಾರ್ಮಿಕ ಹಬ್ಬಗಳ ರಜೆ, ರಾಷ್ಟ್ರೀಯ ಹಬ್ಬದ ರಜೆ ದಿನಗಳು ಭಾನುವಾರಗಳು, ಇತ್ಯಾದಿ ಶಿಕ್ಷಕರಿಗೆ ವಹಿಸುವ ಕಾರ್ಯ ವ್ಯಾಪ್ತಿಯಿಂದ ಶಿಕ್ಷಣದ ಮಟ್ಟ ಎಷ್ಟರ ಮಟ್ಟಿಗೆ ಅಭಿವೃದ್ದಿ ಹೊಂದುವುದೆಂದು ಸರಕಾರ ಆಲೋಚಿಸಿದೆಯೇ?

ಆ) ಆಲೋಚಿಸಿದ ಪಕ್ಷದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು?

ಇ) ಇನ್ನು ಮುಂದೆಯಾದರೂ ಎಚ್ಚೆತ್ತುಕೊಂಡು ಬೇರೆ ಇಲಾಖಾ ನೌಕರರುಗಳಿಂದ ಮೇಲ್ಕಾಣಿಸಿದ ಸರಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಧ್ಯವೇ?

ಈ) ಇನ್ನಾದರೂ ಶಿಕ್ಷಣದ ಮಟ್ಟವನ್ನು ಉತ್ತಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಸ್ಕೌಟ್ ಗೈಡ್, ಟ್ರೈನಿಂಗ್, ಸಿ.ಆರ್.ಸಿ. ಟ್ರೈನಿಂಗ್, ಡಿಪಿಇಪಿ ಟ್ರೈನಿಂಗ್, ಮಕ್ಕಳ ಗಣತಿ ಡ್ಯೂಟಿ, ಗೋಧಿ ವಿತರಣೆ, ಡ್ರಾಪೌಟ್ ಮಕ್ಕಳ ಆಂದೋಳನ, ಮೆರವಣಿಗೆ ಪಲ್ಸ್ ಪೋಲಿಯೋ ಡ್ಯೂಟಿ, ಈ ಮೊದಲಾದ ಕಾರ್ಯಕ್ರಮಗಳು ಮಕ್ಕಳ ಶಿಕ್ಷಣ ಮತ್ತು ಆರೋಗ್ಯಕ್ಕೆ ಪೂರಕವಾದ ಕಾರ್ಯಕ್ರಮಗಳು ಹಾಗೂ ಮತದಾರರ ಯಾದಿಪರೀಕ್ಷಣೆ, ಪರೀಕ್ಷೆ ಮೇಲ್ವಿಚಾರಕರ ಡ್ಯೂಟಿಗಳು, ಗಣತಿ ಟ್ರೈನಿಂಗ್ ಈ ಕಾರ್ಯಕ್ರಮಗಳು ಸಾರ್ವತ್ರಿಕ ರಜಾ ದಿವಸಗಳಲ್ಲಿ ಕೈಗೊಳ್ಳಲಾಗುವ ರಾಷ್ಟ್ರೀಯ ಕಾರ್ಯಕ್ರಮಗಳು ಮತ್ತು

ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಾಗಿರುತ್ತವೆ. ಇದರಲ್ಲಿ ಕೆಲವು ಕಾರ್ಯಕ್ರಮಗಳಲ್ಲಿ ಶಿಕ್ಷಕೇತರ ನೌಕರರನ್ನು ಸಹ ಸೇರಿಸಿಕೊಳ್ಳಲಾಗುತ್ತಿದೆ. ಆದ್ದರಿಂದ ಈ ಕಾರ್ಯ ವ್ಯಾಪ್ತಿಯಿಂದ ಶಿಕ್ಷಣದ ಮಟ್ಟ ಕುಂದುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬೇರೆ ಇಲಾಖಾ ನೌಕರರನ್ನೂ ಸಹ ಈ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.

ಈ) ಸ್ಕೌಟ್ ಗೈಡ್ ಟ್ರೈನಿಂಗ್, ಡಿಪಿಇಪಿ ತರಬೇತಿ ಈ ಕಾರ್ಯಕ್ರಮಗಳು ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಸಹಕಾರಿಯಾಗುತ್ತವೆ.

ಸಂಕೇಶ್ವರದ ಮುರಾರ್ಜಿ ದೇಸಾಯಿ ವಸತಿ ಶಾಲೆ.

2397(2988)

ಶ್ರೀ ಉಮೇಶ್ ವಿಶ್ವನಾಥ ಕತ್ತಿ(ಹುಕ್ಕೇರಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊರಾರ್ಜಿದೇಸಾಯಿ ನಿವಾಸ ವಸತಿ ಶಾಲೆ ಸಂಕೇಶ್ವರ ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಕಟ್ಟಡ ನಿರ್ಮಾಣಕ್ಕಾಗಿ ಇಲ್ಲಿಯವರೆಗೆ ರೂ.48.00 ಲಕ್ಷ ಬಿಡುಗಡೆಯಾಗಿದ್ದು ಸದರಿ ಕೆಲಸವು ಭೂಸೇನಾ ನಿಗಮದ ವತಿಯಿಂದ ಕಟ್ಟಡ ನಿರ್ವಹಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಆದರೆ ಸದರಿ ಸ್ಥಳದಲ್ಲಿ ಕಟ್ಟಡದ ನಿರ್ಮಾಣ ಕಾರ್ಯವನ್ನು ಇನ್ನೂ ಏಕೆ ಪ್ರಾರಂಭಿಸಿಲ್ಲ ಮತ್ತು ಕಾಮಗಾರಿ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಹಾಗೂ ಕೆಲಸ ಮುಗಿಯಲು ಎಷ್ಟು ಅವಧಿ ಬೇಕಾಗುತ್ತದೆ.

ಆ) ಬೆಳಗಾವಿ ಜಿಲ್ಲೆ, ಬೆಳಗಾವಿ ಮಣ್ಣೂರಿನಲ್ಲಿ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ ಕಟ್ಟಡ ಕೆಲಸವು ಅಪೂರ್ಣವಾಗಿದ್ದು ಅಲ್ಲಿಯ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳಿಲ್ಲದೆ ಕಟ್ಟಡವನ್ನು ಹಸ್ತಾಂತರಿಸುವುದಾಗಿ ತಿಳಿದು ಬಂದಿದೆ. ಅಪೂರ್ಣವಾದ ಕಟ್ಟಡವನ್ನು ಹಸ್ತಾಂತರ ಮಾಡಿಕೊಂಡಿದ್ದೇಕೆ? ಕಳಪೆ ಕಾಮಗಾರಿ ಬಗ್ಗೆ ಸರ್ಕಾರವಾಗಲೀ ಅಥವಾ ಸಂಬಂಧಿಸಿದ ಅಧಿಕಾರಿಗಳಾಗಲೀ ಗಮನಹರಿಸಿ ತೆಗೆದುಕೊಂಡ ಕ್ರಮವೇನು?

ಶ್ರೀ ಎಚ್.ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):